02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ.**619/2018**

ಹೆಸರುಃ ಜಬೀ ಉಲ್ಲಾ — ಚಾಸಾಃ 3

ತಂದೆಃ ಅಬ್ದುಲ್ ರೆಹಮಾನ್ — ಫ್ರಾಸಾ:2

ವಯಸ್ಸುಃ 30 ವರ್ಷ

ಉದ್ಯೋಗಃ ಅಡಿಕೆ ವ್ಯಾಪಾರ

ವಾಸ ಸ್ಥಳಃ ಟಿಪ್ಪು ನಗರ , ಚನ್ನಗಿರಿ.

ಸಾಕ್ಷಿಗೆ ದಿನಾಂಕಃ 21-10-2019 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಈಗ ಸಾಕ್ಷಿಗೆ ದಿನಾಂಕಃ 28.09.2017 ರ ಅಮಾನತ್ತು ಪಂಚನಾಮೆ ತೋರಿಸುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಅದನ್ನು ನಿಶಾನೆ ಪಿ 5 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 5 ಎ ಎಂದು ಗುರುತಿಸಲಾಯಿತು. ಈಗ್ಗೆ 01 ½ ವರುಷಗಳ ಹಿಂದೆ ವಡ್ನಾಳ್ ರಾಜಣ್ಣ ಬಡಾವಣೆಯಲ್ಲಿ ಒಂದು ಮನೆಗೆ ಕರೆದುಕೊಂಡು ಹೋಗಿ ಮಹಜರ್ ನ್ನು ಜರುಗಿಸಿರುತ್ತಾರೆ. ಅಲ್ಲಿ ನನ್ನ ಸಹಿ ಪಡೆದಿರುತ್ತಾರೆ. ನನ್ನ ಜೊತೆ ಚಾಸಾ.02 ಸಹಿ ಮಾಡಿರುತ್ತಾರೆ. ಆಗ ಒಂದು ರಾಡು ಮತ್ತು ಬ್ಯಾಗ ನ್ನು ವಶಪಡಿಸಿಕೊಂಡಿರುತ್ತಾರೆ.

**(**ಈ ಹಂತದಲ್ಲಿ ಸಾಕ್ಷಿಯು ಮಹಜರ್ ಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು**,** ಮಹಜರ್ ನ್ನು ನೋಡಲಾಗಿ ಸಾಕ್ಷಿಯು ಹೇಳಿಕೆಗೆ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ**.** ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು**.)**

**-2-**

ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ

ದಿನಾಂಕಃ 28.03.2017 ರಂದು ನನ್ನ ಹಾಗೂ ಚಾಸಾ.02 ರ ಸಮಕ್ಷಮ ಚನ್ನಗಿರಿ ಪೋಲೀಸ್ ಠಾಣೆಯಲ್ಲಿ ಆರೋಪಿಗಳನ್ನು ಅಂಗಶೋಧನೆ ಮಾಡಿದಾಗ 01 ನೇ ಆರೋಪಿಯ ಬಳಿ ಯಾವುದೇ ವಸ್ತುಗಳು ಸಿಕ್ಕಿರುವುದಿಲ್ಲ , 02 ನೇ ಆರೋಪಿಯನ್ನು ಪರಿಶೀಲಿಸಿದಾಗ ಆರೋಪಿಯ ಜೇಬಿನಲ್ಲಿ ಐಐಎಫ್ ಎಲ್ ಫೈನಾನ್ಸ್‌ಗೆ ಸೇರಿದ ಶಿಲ್ಪ ಎಂಬುವರ ಹೆಸರಿಗೆ ಇರುವ ಒಂದು ಚೀಟಿ ಇದ್ದು ಅದರಲ್ಲಿ ಪ್ರಿನ್ಸಿಪಲ್ ಮೊತ್ತ ರೂ.62,000/- ಇದ್ದು ಬರೆದಿರುವ ಚೀಟಿ ಸಿಕ್ಕಿರುತ್ತದೆ ಎಂದರೆ ಸರಿ ಅಲ್ಲ . 03 ನೇ ಆರೋಪಿಯನ್ನು ಪರಿಶೀಲಿಸಿದಾಗ ನಾಗೇಂದ್ರ ಎನ್ನುವ ಹೆಸರಿನ ಗೋಲ್ಡ್ ಲೋನ್ ಅಕೌಂಟ್ ಇದ್ದು ಅದರಲ್ಲಿ ನಕ್ಲೇಸ್ ಅಂತ ನಮೂದಾಗಿದೆ ಪ್ರಿನ್ಸಿಪಲ್ ಮೊತ್ತ ರೂ.29,000/- ಎಂದುನಮೂದಾಗಿರುತ್ತದೆ ಎಂದರೆ ಸರಿ ಅಲ್ಲ . ಇವುಗಳನ್ನು ಆರೋಪಿಗಳು ಶಿಲ್ಪ ಮತ್ತು ನಾಗೇಂದ್ರ ಅವರ ಹೆಸರಿನಲ್ಲಿ ಕಳ್ಳತನ ಮಾಡಿದ ಆಭರಣಗಳನ್ನು ಗಿರವಿ ಇಟ್ಟು ಸಾಲ ಪಡೆದಿರುತ್ತೇವೆ ಎಂದು ಹೇಳಿದ ಕಾರಣ ಅವುಗಳನ್ನು ಸಂಜೆ 3.45 ರಿಂದ 4.15 ವರೆಗೆ ಪಂಚನಾಮೆ ಮೂಲಕ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ ಅಲ್ಲ . ಆರೋಪಿಗಳಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ಪಾಟೀ ಸವಾಲು **-** ಆರೋಪಿತರ ಪರ ವಕೀಲರಿಂದ **.**

ನನಗೆ ಪಂಚನಾಮೆ ಜರುಗಿಸುವ ಮೊದಲು ಪೋಲೀಸರು ಯಾವುದೇ ನೋಟೀಸ್ ನೀಡಿರುವುದಿಲ್ಲ.

ಮರು ವಿಚಾರಣೆ ಇಲ್ಲ**.**

**(** ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು**.)**

**ಓ.ಹೇ.ಕೇ. ಸರಿ ಇದೆ.**

**02** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ**,**

ಚನ್ನಗಿರಿ**.**